# ಸಬ್ಬತ್

## ಓವೆನ್ ಡಿ. ಓಲ್‌ಬ್ರಿಟ್ಚ್

"ಸಬ್ಬತ್" ಎಂಬ ಪದವು ಹಿಬ್ರೂ ಪದ *Sabbath* ಎಂಬುದರ ಮತ್ತು ಗ್ರೀಕ ಪದ *sabbaton* ಎಂಬುದರ ಭಾಷಾಂತರವಾಗಿದೆ. "ದೂರವಾಗು, ನಿಲ್ಲಿಸು ಮತ್ತು ವಿಶ್ರಾಂತಿ" ಎಂದರ್ಥ ಕೊಡುತ್ತದೆ. "ಸಬ್ಬತ್" ಎಂಬ ಮಾತು, ಮೋಶೆಯ ಕಾಲದಿಂದ ಇಸ್ರಾಯೇಲ್ಯರು ಆಚರಿಸಿದ ವಿಶೇಷ ವಿಶ್ರಾಂತಿಯ ದಿನಕ್ಕೆ ಕೊಟ್ಟ ಹೆಸರಾಗಿತ್ತು. ವಾರದ ಸಬ್ಬತ್‌ಗಳಿಗೆ ಬೇಕಾಗಿದ್ದ ವಿಶ್ರಾಂತಿಯು ಶುಕ್ರವಾರ ಸಾಯಂಕಾಲ 6:00ರಿಂದ ಶನಿವಾರ ಸಾಯಂಕಾಲ 6:00ರವರೆಗೆ. "ಸಬ್ಬತ್" ಎಂಬ ಪದವು ವಿಮೋಚನಕಾಂಡ 16:23ರಲ್ಲಿ ಮೊದಲನೆಯ ಸಲ ಕಂಡು ಬರುತ್ತದೆ. ಆದರೆ ಏಳನೆಯ ದಿನದ ವಿಶ್ರಾಂತಿಯೊಂದಿಗೆ ಸಂಬಂಧಿಸಿ ಆದಿಕಾಂಡದಲ್ಲಿ ಉಪಯೋಗಿಸಲ್ಪಟ್ಟಿರುವದಿಲ್ಲ.

ಯೆಹೂದ್ಯರಿಗೆ ವಾರದ ಸಬ್ಬತ್ ಅಲ್ಲದೇ, ದೋಷಪರಿಹಾರಕ ದಿನದಂಥ ವಿಶೇಷ ಸಬ್ಬತ್‌ಗಳೂ ಇದ್ದವು (ಯಾಜಕಕಾಂಡ 16:29-31; 23:27-32) ಮತ್ತು ಪ್ರತೀ ಏಳನೆಯ ವರ್ಷ ಸಬ್ಬಾಟಿಕಲ್ ಇಯರ್ (ಸಬ್ಬತ್ ವರ್ಷ) ಎಂದು ಆಚರಿಸಲು ಆಜ್ಞಾಪಿಸಲ್ಪಟ್ಟಿದ್ದರು (ವಿಮೋಚನಕಾಂಡ 23:10, 11; ಯಾಜಕಕಾಂಡ 25:1-7; ಧರ್ಮೋಪದೇಶಕಾಂಡ 15:1-11). ಸಬ್ಬತ್ ದಿನಗಳೆಂದು ಕರೆಯಲ್ಪಡದಿದ್ದರೂ ಇತರ ಸಂದರ್ಭಗಳು ಕೆಲಸವು ನಿಲ್ಲಿಸಲ್ಪಡಬೇಕೆಂಬ ಅದೇ ಪ್ರತಿಬಂಧಕಾಜ್ಞೆಯೊಂದಿಗೆ ಪ್ರತ್ಯೇಕಿಸಿಡಲ್ಪಟ್ಟವು: ಪಸ್ಕದ ದಿನಗಳಲ್ಲಿ ಮೊದಲನೆಯ ಮತ್ತು ಏಳನೆಯ ದಿನ (ಅರಣ್ಯಕಾಂಡ 28:18); ವಾರಗಳ ಹಬ್ಬದ ಮೊದಲನೆಯ ದಿನ, ಸುಗ್ಗಿ ಹಬ್ಬ ಮತ್ತು ಪಂಚಾಶತ್ತಮದ ದಿನ ಎಂದು ಕರೆಯಲ್ಪಟ್ಟಿದೆ (ಯಾಜಕಕಾಂಡ 23:21; ಅರಣ್ಯಕಾಂಡ 28:26); ತುತೂರಿಗಳ ಹಬ್ಬದ ಸಮಯದಲ್ಲಿ (ಯಾಜಕಕಾಂಡ 23:24, 25; ಅರಣ್ಯಕಾಂಡ 29:1, 7, 12, 35); ಮತ್ತು ಪರ್ಣಶಾಲೆಗಳ ಹಬ್ಬ (ಯಾಜಕಕಾಂಡ 23:35, 36).

ಆದಿಕಾಂಡದಲ್ಲಿ ಏಳನೆಯ ದಿನದ ವಿಶ್ರಾಂತಿಗೆ ಉಲ್ಲೇಖವು 2:3ರಲ್ಲಿ ಮಾತ್ರ ಇರುತ್ತದೆ: "ದೇವರು ತನ್ನ ಸೃಷ್ಟಿ ಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು." ಅನೇಕ ವರ್ಷಗಳ ನಂತರ ದೇವರ ಜನಾಂಗಕ್ಕಾಗಿ ಸಬ್ಬತ್ ಆಜ್ಞಾಪಿಸಲ್ಪಟ್ಟಿತು. ನೆಹಮೀಯನು ಹೀಗೆ ಹೇಳಿದ್ದಾನೆ,

> ಸಿನಾಯಿ ಬೆಟ್ಟದ ಮೇಲೆ ಇಳಿದುಬಂದು ಆಕಾಶದ ಕಡೆಯಿಂದ ಅವರೊಡನೆ ಮಾತಾಡಿ ಅವರಿಗೆ ನೀತಿನಿಯಮಗಳನ್ನು ಯಥಾರ್ಥ ಧರ್ಮೋಪದೇಶವನ್ನೂ ಶ್ರೇಷ್ಠವಾದ ಆಜ್ಞಾವಿಧಿಗಳನ್ನೂ ಅನುಗ್ರಹಿಸಿದಿ, ನಿನ್ನ ಸೇವಕನಾದ ಮೋಶೆಯ ಮುಖಾಂತರ ನಿನಗೆ ಮೀಸಲಾದ ಸಬ್ಬತೆಂಬ ವಿಶ್ರಾಂತಿ ದಿನವನ್ನು ಅವರಿಗೆ ಪ್ರಕಟಿಸಿ ಆಜ್ಞಾವಿಧಿಧರ್ಮಗಳನ್ನು ಕಲಿಸಿದಿ (9:13, 14).

ಯೆಹೆಜ್ಕೇಲನು ಹೀಗೆ ಬರೆದಿದ್ದಾನೆ,

“ಆಗ ನಾನು ಅವರನ್ನು ಐಗುಪ್ತದೇಶದೊಳಗಿಂದ ಬಿಡಿಸಿ ಅರಣ್ಯಕ್ಕೆ ಕರೆತರಲು ಕೈಕೊಳ್ಳುವವರಿಗೆ ಜೀವಾಧಾರವಾದ ನನ್ನ ಆಜ್ಞಾವಿಧಿಗಳನ್ನು ಅವರಿಗೆ ತಿಳಿಸಿಕೊಟ್ಟೆನು. ಇದಲ್ಲದೆ ತಮ್ಮನ್ನು ದೇವಜನರನ್ನಾಗಿ ಮಾಡಿರುವ ಯೆಹೋವನು ನಾನೇ ಎಂದು ಅವರು ತಿಳುಕೊಳ್ಳುವಂತೆ ನನಗೂ ಅವರಿಗೂ ಗುರುತಾದ ಸಬ್ಬತ್ ದಿನಗಳನ್ನು ಅವರಿಗೆ ನೇಮಿಸಿದೆನು” (ಯೆಹೆಜ್ಕೇಲ 20:10-12).

ಇದು ಧರ್ಮೋಪದೇಶಕಾಂಡ 5:15ರಲ್ಲಿಯ ಮೋಶೆಯ ಹೇಳಿಕೆಯನ್ನು ಪ್ರತಿಧ್ವನಿಸುತ್ತದೆ: “ಐಗುಪ್ತ ದೇಶದಲ್ಲಿ ನೀವೂ ದಾಸತ್ವದಲ್ಲಿದ್ದದ್ದನ್ನೂ ನಿಮ್ಮ ದೇವರಾದ ಯೆಹೋವನು ಭುಜ ಪರಾಕ್ರಮದಿಂದಲೂ ಶಿಕ್ಷಾ ಹಸ್ತದಿಂದಲೂ ನಿಮ್ಮನ್ನು ಬಿಡುಗಡೆ ಮಾಡಿದ್ದನ್ನೂ ಜ್ಞಾಪಕ ಮಾಡಿಕೊಳ್ಳಿರಿ. ನೀವು ಸಬ್ಬತ್ ದಿನವನ್ನು ಆಚರಿಸಬೇಕೆಂಬುದನ್ನು ನಿಮ್ಮ ದೇವರಾದ ಯೆಹೋವನು ಇದಕ್ಕಾಗಿಯೇ ಆಜ್ಞಾಪಿಸಿದ್ದಾನೆ.” ಇಸ್ರಾಯೇಲ್ಯರು ಐಗುಪ್ತದಿಂದ ಹೊರಗೆ ಬಂದನಂತರ ಸಿನಾಯಿ ಬೆಟ್ಟದ ಬಳಿಯಲ್ಲಿ ತಿಳಿಸಲ್ಪಟ್ಟ ಸಬ್ಬತ್, ದೇವರಿಗೂ ಇಸ್ರಾಯೇಲ್ಯರಿಗೂ ಮಧ್ಯದಲ್ಲಿಯ ಒಂದು ಸಂಕೇತವೂ ಒಡಂಬಡಿಕೆಯೂ ಆಗಿತ್ತು (ವಿಮೋಚನಕಾಂಡ 31:13, 16, 17; ಯೆಹೆಜ್ಕೇಲ 20:12).

ಸಿನಾಯಿ ಪರ್ವತದ ಬಳಿಯಲ್ಲಿ ಸಬ್ಬತ್ ಪ್ರಕಟನೆಗಾಗಿ ಸಿದ್ಧಪಡಿಸುವಿಕೆಯಲ್ಲಿ, ದೇವರು ಇಸ್ರಾಯೇಲ್ಯರಿಗೆ ಆರನೆಯ ದಿನದಂದು ಹೆಚ್ಚು ಮನ್ನವನ್ನು ಕೊಟ್ಟನು (ವಿಮೋಚನಕಾಂಡ 16:23-30). ಇಸ್ರಾಯೇಲ್ಯರು ಪ್ರತೀ ಆರನೆಯ ದಿನದಂದು ಏಳನೆಯ ದಿನಕ್ಕಾಗಿ ಸಾಕಾಗುವಷ್ಟು ಹೆಚ್ಚು ಮನ್ನವನ್ನು ಕೂಡಿಸಬೇಕಾಗಿತ್ತು ಮತ್ತು ಸಬ್ಬತ್ ದಿನದಂದು ತಮ್ಮ ವಾಸಸ್ಥಳಗಳಲ್ಲಿ ಇರಬೇಕಾಗಿತ್ತು. “ನೋಡಿರಿ, ನೀವು ಸಬ್ಬತ್ ದಿನವನ್ನು ಆಚರಿಸಬೇಕೆಂದು ನಾನು ಅಪ್ಪಣೆ ಮಾಡಿರುವದರಿಂದಲೇ ಆರನೆಯ ದಿನದಲ್ಲಿ ಎರಡು ದಿನದ ಆಹಾರವು ನಮಗೆ ದೊರಕುವಂತೆ ಅನುಗ್ರಹಿಸಿದ್ದೇನೆ. ನಿಮ್ಮಲ್ಲಿ ಪ್ರತಿಯೊಬ್ಬನು ತಾನಿರುವಲ್ಲಿಯೇ ಇರಬೇಕು; ಏಳನೆಯ ದಿನದಲ್ಲಿ ಒಬ್ಬನೂ ತನ್ನ ಸ್ಥಳವನ್ನು ಬಿಟ್ಟು ಹೊರಗೆ ಹೋಗಕೂಡದು” ಎಂದು ಮೋಶೆಗೆ ವಿವರಿಸಿದನು (ವಿಮೋಚನಕಾಂಡ 16:29).

## ದಶಾಜ್ಞೆಗಳಲ್ಲಿ ಸಬ್ಬತ್

ದಶಾಜ್ಞೆಗಳಲ್ಲಿ ಸಬ್ಬತ್ತಿನ ಮೂರು ಮಹತ್ವದ ಸಂಗತಿಗಳು ಹೇಳಲ್ಪಟ್ಟಿವೆ (ವಿಮೋಚನಕಾಂಡ 20:8-11).

(1) ಸಬ್ಬತ್ತು ಸಂಪೂರ್ಣವಾಗಿ ವಿಶ್ರಾಂತಿಯ ದಿನವಾಗಿರಬೇಕಾಗಿತ್ತು. ಕುಟುಂಬದ ಸದಸ್ಯರಿಂದ, ಸೇವಕರುಗಳಿಂದ, ಪ್ರಾಣಿಗಳಿಂದ, ಸಂದರ್ಶಕರಿಂದ ಇಲ್ಲವೇ ಇಸ್ರಾಯೇಲು ದೇಶದ ಒಳಗಿರುವ ಯಾವುದೇ ಜನರಿಂದ ಯಾವುದೇ ಕೆಲಸವು ಮಾಡಲ್ಪಡಬಾರದಾಗಿತ್ತು (ವಚನಗಳು 8-10; ಧರ್ಮೋಪದೇಶಕಾಂಡ 5:12-15).

(2) ದೇವರು ಏಳನೆಯ ದಿನವನ್ನು ಸಬ್ಬತ್ತಿನಂತೆ, ವಿಶ್ರಾಂತಿಯ ದಿನದಂತೆ ಆಯ್ದು ಕೊಂಡನು, ಯಾಕಂದರೆ ಆತನು ಏಳನೆಯ ದಿನದಂದು ವಿಶ್ರಮಿಸಿಕೊಂಡನು. “ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿ ಕೊಂಡನು. ಆದುದರಿಂದ ಯೆಹೋವನು ಸಬ್ಬತ್ ದಿನವನ್ನು ತನ್ನ ದಿನವಾಗಿರಲಿ ಎಂದು ಆಶೀರ್ವದಿಸಿದನು” (ವಿಮೋಚನಕಾಂಡ 20:11).

(3) ಸಬ್ಬತ್ತು ಇಸ್ರಾಯೇಲ್ಯರಿಗಾಗಿ ಸ್ಮಾರಕ ದಿನವಾಗಿತ್ತು, ಐಗುಪ್ತದ

ಗುಲಾಮಗಿರಿಯಿಂದ ತಮ್ಮನ್ನು ದೇವರು ಬಿಡುಗಡೆ ಮಾಡಿದ್ದರ ಆಚರಣೆಯಲ್ಲಿ ವಿಶ್ರಾಂತಿಗಾಗಿ ಮತ್ತು ಜ್ಞಾಪಕಕ್ಕಾಗಿ ಒಂದು ವಿಶೇಷ ದಿನವಾಗಿತ್ತು. "ಐಗುಪ್ತ ದೇಶದಲ್ಲಿ ನೀವೂ ದಾಸತ್ವದಲ್ಲಿದ್ದದ್ದನ್ನೂ ನಿಮ್ಮ ದೇವರಾದ ಯೆಹೋವನು ಭುಜಪರಾಕ್ರಮದಿಂದಲೂ ಶಿಕ್ಷಾಹಸ್ತದಿಂದಲೂ ನಿಮ್ಮನ್ನು ಬಿಡುಗಡೆ ಮಾಡಿದ್ದನ್ನೂ ಜ್ಞಾಪಕ ಮಾಡಿಕೊಳ್ಳಿರಿ. ನೀವು ಸಬ್ಬತ್ ದಿನವನ್ನು ಆಚರಿಸಬೇಕೆಂಬುದನ್ನು ನಿಮ್ಮ ದೇವರಾದ ಯೆಹೋವನು ಇದಕ್ಕಾಗಿಯೇ ಆಜ್ಞಾಪಿಸಿದ್ದಾನೆ" (ಧರ್ಮೋಪದೇಶಕಾಂಡ 5:15).

ದೇವರು ಏಳನೆಯ ದಿನದಂದು ವಿಶ್ರಮಿಸಿಕೊಂಡದ್ದರಿಂದ ಆತನು ಆ ದಿನವನ್ನು ಆಯ್ದುಕೊಂಡನು, ಆದರೆ ಆ ದಿನವು ಸೃಷ್ಟಿ ಕರ್ತನ ಗೌರವಾರ್ಥವಾಗಿ ಇಲ್ಲವೇ ಏಳನೆಯ ದಿನ ಆತನು ವಿಶ್ರಮಿಸಿದ್ದಕ್ಕಾಗಿ ಒಂದು ಸ್ಮಾರಕ ದಿನದಂತೆ ಪ್ರತ್ಯೇಕವಾಗಿ ಇಡಬೇಕು (ಪವಿತ್ರ ಮಾಡಬೇಕು) ಎಂದು ಆತನು ಎಲ್ಲಿಯೂ ಆಜ್ಞಾಪಿಸಿರುವದಿಲ್ಲ. ಸಬ್ಬತ್ತು ಇಸ್ರಾಯೇಲ್ಯರಿಗಾಗಿ ಆರಾಧನೆಯ ವಿಶೇಷ ದಿನವಾಗಿರಬೇಕು ಎಂಬುದರ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ.

ಗುಲಾಮಗಿರಿಯೊಳಗಿಂದ ಜನರನ್ನು ಹೊರಗೆ ತಾನು ತಂದದ್ದನ್ನು ಜ್ಞಾಪಿಸಿ ಕೊಳ್ಳುವದಕ್ಕಾಗಿ ದೇವರು ಈ ದಿನವನ್ನು ಅವರಿಗೆ ಕೊಟ್ಟನು ಎಂಬ ಸಂಗತಿಯು ಅವರು ಐಗುಪ್ತದ ಗುಲಾಮಗಿರಿಯಿಂದ ಬಿಡುಗಡೆ ಮಾಡಲ್ಪಡುವದಕ್ಕಿಂತ ಮೊದಲು ಅದು ಕೊಡಲ್ಪಟ್ಟಿರಲಿಕ್ಕಿಲ್ಲವೆಂದು ಅರ್ಥಕೊಡುತ್ತದೆ. ಇದಲ್ಲದೇ, ಅವರು ಐಗುಪ್ತದಲ್ಲಿ ಗುಲಾಮರಾಗಿದ್ದ ನಾಲ್ಕುನೂರು ವರ್ಷಗಳಲ್ಲಿ ಸಬ್ಬತ್‌ನ್ನು ಕೈಕೊಳ್ಳಲು ಶಕ್ತರಾಗಿರಲಿಲ್ಲವೆಂಬುದು ಬಹಳಮಟ್ಟಿಗೆ ನಿಶ್ಚಯವಾಗುತ್ತದೆ (ಆದಿಕಾಂಡ 15:13; ಅಪೊಸ್ತಲರ ಕೃತ್ಯಗಳು 7:6).

## ಸೃಷ್ಟಿಯ ಸಮಯದಲ್ಲಿ ಸಬ್ಬತ್ ಕೊಡಲ್ಪಟ್ಟಿತೋ?

ದೇವರು ಸೃಷ್ಟಿಸುವದನ್ನು ನಿಲ್ಲಿಸಿದಾಗ ಆ ದಿನದಿಂದ ಮಾನವರು ಆಚರಿಸಲ್ಪಡ ಬೇಕಾದ ದಿನದಂತೆ ಆತನು ಏಳನೆಯ ದಿನವನ್ನು ಪ್ರತ್ಯೇಕಿಸಿದನೆಂದು ಆದಿಕಾಂಡ 2:1-3 ಬೋಧಿಸುತ್ತದೋ? ಮೊದಲ ನೋಟಕ್ಕೆ, ಸೃಷ್ಟಿ ಕಾರ್ಯದಿಂದಲೇ ಸಬ್ಬತ್ ಜಾರಿಯಲ್ಲಿದೆ ಎಂದು ನಾವು ತೀರ್ಮಾನಿಸಬಹುದು. ಹಾಗಿದ್ದರೂ, ಅಂಥ ತೀರ್ಮಾನವು, ದೇವರು ಇಸ್ರಾಯೇಲ್ಯರನ್ನು ಐಗುಪ್ತದ ಗುಲಾಮಗಿರಿಯಿಂದ ಬಿಡುಗಡೆ ಮಾಡಿದ ನಂತರ ಅವರಿಗಾಗಿ ಒಂದು ಸ್ಮಾರಕ ದಿನದಂತೆ ಸಬ್ಬತ್‌ನ್ನು ಕೊಟ್ಟ ಸಂಗತಿಯನ್ನು ಕಡೆಗಣಿಸುತ್ತದೆ. ಸೃಷ್ಟಿಯಾದ ನಂತರ ಅನೇಕ ವರ್ಷಗಳಾದ ತರುವಾಯ ಮೋಶೆಯು ಆದಿಕಾಂಡ ಗ್ರಂಥವನ್ನು ಬರೆದ ಸಂಗತಿಯನ್ನು ಅದು ಕಡೆಗಣಿಸುತ್ತದೆ.

ಯುನೈಟೆಡ್ ಸ್ಟೇಟ್ಸ್‌ದಲ್ಲಿ ಸಾಮಾಜಿಕ ಹಕ್ಕು ಬಾಧ್ಯತೆಗಳ ನಾಯಕನಾದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, 1968ರಲ್ಲಿ ಕೊಲ್ಲಲ್ಪಟ್ಟವರ ಜನ್ಮ ದಿನವು ಜನವರಿಯ ಮೂರನೇ ಸೋಮವಾರದಂದು ಆಚರಿಸಲ್ಪಡುತ್ತದೆ. ಒಬ್ಬ ಚರಿತ್ರೆಗಾರನು ಕಿಂಗ್ ಅವರ ಆತ್ಮಚರಿತ್ರೆಯನ್ನು ಬರೆಯುವಾಗ, ಜನವರಿ 16, 1929ರಂದು ಅವರು ಜನಿಸಿದ್ದನ್ನು ಬರೆಯಬಹುದು. ಮತ್ತು ಕಿಂಗ್ ಅವರ ಜನ್ಮ ದಿನವನ್ನು ಗೌರವಿಸಲು ಒಂದು ವಿಶೇಷವಾದ ದನವು ಪ್ರತ್ಯೇಕಿಸಲ್ಪಟ್ಟಿದೆ ಎಂಬ ಟಿಪ್ಪಣಿಯನ್ನು ಕೂಡಿಸಬಹುದು. ಅನೇಕ ವರ್ಷಗಳ ನಂತರ, ಕಿಂಗ್ ಅವರ ಜನ್ಮ ದಿನವನ್ನು ಗೌರವಿಸಲು ಜನವರಿಯಲ್ಲಿ ಮೂರನೆಯ ಸೋಮವಾರವನ್ನು ರಾಷ್ಟ್ರೀಯ ದಿನವನ್ನಾಗಿ ಮಾಡಲು, ನವಂಬರು 2,

1983 ರಂದು ಪ್ರಸಿಡೆಂಟ್ ರೋನಾಲ್ಡ ರೇಗಲನ್ನರು ತಮ್ಮ ರುಜುವಾತಾಕಿದರು ಎಂದು ಅವನು ವಿವರಿಸ ಬೇಕಾಗಿರಲಿಲ್ಲ.

ಈ ಆತ್ಮಚರಿತ್ರೆಕಾರನು ಮಾಡುವಂತೆ, ಮೋಶೆಯು ಹಿಂದಿರುಗಿ ನೋಡಿದನು, ಸೃಷ್ಟಿ ಮತ್ತು ದೇವರು ಏಳನೆಯ ದಿನ ವಿಶ್ರಮಿಸಿ ಕೊಂಡದ್ದರ ಬಗ್ಗೆ ಹೇಳಿದನಂತರ, ಅವನು ಆಗ ದೇವರು ಆ ದಿನವನ್ನು ವಿಶ್ರಾಂತಿಯ ದಿನವಾಗಿ ಪ್ರತ್ಯೇಕಿಸಿದನು ಎಂದು ಹೇಳುತ್ತಾನೆ. ಆ ಸಮಯದಲ್ಲಿ ಅದು ಯಾರಿಂದಲಾದರೂ ಆಚರಿಸಲ್ಪಡ ಬೇಕೆಂದು ಆತನು ಹೇಳಲಿಲ್ಲ. ಅನಂತರದಲ್ಲಿ ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟ ನಂತರ ಸಿನಾಯಿ ಬೆಟ್ಟದ ಬಳಿಯಲ್ಲಿ ಸಬ್ಬತ್‌ನ್ನು ಅಗತ್ಯವಾಗಿದ್ದ ವಿಶ್ರಾಂತಿಯ ದಿನವನ್ನಾಗಿ ದೇವರು ಮಾಡಿದನೆಂದು ಮೋಶೆ ಹೇಳಿದನು (ಧರ್ಮೋಪದೇಶಕಾಂಡ 5:15). ಇತರ ಪರಿಶುದ್ಧ ಬರಹಗಳು ಇದನ್ನು ಸಬ್ಬತ್ ತಿಳಿಸಲ್ಪಟ್ಟ ಮತ್ತು ಆಚರಿಸಲ್ಪಡಬೇಕಾದ ಸಮಯವಾಗಿತ್ತೆಂದು ದೃಢಪಡಿಸುತ್ತವೆ (ನೆಹೆಮೀಯ 9:13, 14; ಯೆಹೆಜ್ಕೇಲ 20:10-12).

ಹಿಂದಿನ ನೋಟದೊಂದಿಗೆ ಬರೆಯುವ ಶೈಲಿಯು ಹಳೇ ಒಡಂಬಡಿಕೆಯ ಇತರ ಭಾಗಗಳಲ್ಲಿಯೂ ಕಂಡುಬರುತ್ತದೆ. ಉದಾಹರಣೆ, ಆದಾಮ ಮತ್ತು ಹವ್ವರು ತಂದೆತಾಯಿಗಳಾಗುವ ಮೊದಲು, ಮನುಷ್ಯನು ತನ್ನ ತಂದೆ ತಾಯಿಗಳನ್ನು ಬಿಟ್ಟು (ಆದಿಕಾಂಡ 2:24) ತನ್ನ ಹೆಂಡತಿಯನು ಸೇರಿಕೊಳ್ಳುವನು ಯಾಕೆ ಎಂದು ವಿವರಿಸಿದನು. ಹವ್ವಳು ಜನ್ಮಕೊಡುವ ಮೊದಲೇ ಆದಾಮನು ತನ್ನ ಹೆಂಡತಿಯನ್ನು “ಹವ್ವ” ಎಂದು ಕರೆದನು. ಅದರ ಅರ್ಥ “ಜೀವಿಸುವ ಎಲ್ಲರ ತಾಯಿ” ಎಂಬುದು (ಆದಿಕಾಂಡ 3:20).

ಆ ಹೆಸರುಗಳನ್ನು ಹೊಂದಿಕೊಳ್ಳುವ ಮೊದಲೇ ವಿವಿಧ ಸ್ಥಳಗಳು ನಿರ್ದಿಷ್ಟವಾದ ಹೆಸರುಗಳಿಂದ ಕರೆಯಲ್ಪಟ್ಟಿವೆ. ಉದಾಹರಣೆಯಾಗಿ, ಹೆಸರು ಕೊಡಲ್ಪಡುವ ಮೊದಲೇ (ಆದಿಕಾಂಡ 28:19) ಬೇತೇಲ ಎಂಬುದು “ಬೇತೇಲ” ಎಂದು ಹೆಸರಿನಿಂದ ಹೇಳಲ್ಪಟ್ಟಿದೆ (ಆದಿಕಾಂಡ 12:8; 13:3). ಹಾಗೆಯೇ “ಬೇರ್ಷೆಬಾ” ಎಂದು ಕರೆಯಲ್ಪಡುವ ಮೊದಲೇ (ಆದಿಕಾಂಡ 21:31) “ಬೇಷೆಬಾ”ಕ್ಕೆ ಉಲ್ಲೇಖ ಕಂಡು ಕೊಳ್ಳುತ್ತೇವೆ (ಆದಿಕಾಂಡ 21:14), “ಹೊರ್ಮಾ” ಎಂದು ಕರೆಯಲ್ಪಡುವ ಮೊದಲು (ಅರಣ್ಯಕಾಂಡ 21:3), “ಹೊರ್ಮಾ” (ಅರಣ್ಯಕಾಂಡ 14:45), “ಗಿಲ್ಗಾಲ” ಎಂದು ಕರೆಯಲ್ಪಡುವ ಮೊದಲು (ಯೆಹೋಶುವ 5:9) “ಗಿಲ್ಗಾಲ” (ಧರ್ಮೋಪದೇಶಕಾಂಡ 11:30; ಯೆಹೋಶುವ 4:19, 20). “ದಾನ್” ಎಂದು ಕರೆಯಲ್ಪಡುವ ಮೊದಲು ದಾನ್ (ಧರ್ಮೋಪದೇಶಕಾಂಡ 34:1; ಯೆಹೋಶುವ 19:47; ನ್ಯಾಯಸ್ಥಾಪಕರು 18:29) ಮತ್ತು “ಯೆಬುಸ” ಎಂಬ ಹೆಸರು ಹೊಂದಿರುವಾಗಲೇ (ನ್ಯಾಯಸ್ಥಾಪಕರು 19:10) ಯೆರೂಸಲೇಮ (ಯೆಹೋಶುವ 10:1).

ಇಸ್ರಾಯೇಲ್ಯರು ಗುಲಾಮಗಿರಿಯಿಂದ ಹೊರಗೆ ಬಂದಾಗ ಸಬ್ಬತ್ ನಿಯಮವು ದಶಾಜ್ಞೆಗಳ ಭಾಗವಾಗಿತ್ತು. ಮೊದಲಿನ ಯಾವದೇ ಸಂತತಿಗಳೊಂದಿಗೆ ಈ ಒಡಂಬಡಿಕೆಯನ್ನು ದೇವರು ಮಾಡಿಕೊಂಡಿರಲಿಲ್ಲ ಎಂದು ಮೋಶೆ ಒತ್ತಿ ಹೇಳಿದನು (ಧರ್ಮೋಪದೇಶಕಾಂಡ 5:1-3). ಹೀಗೆ ಸಬ್ಬತ್ ನಿಯಮವು ಆದಾಮ ಮತ್ತು ಹವ್ವರಿಗೆ ಇಲ್ಲವೇ ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟ ಸಮಯದ ವರೆಗೆ ಯಾರಿಗೂ ಕೊಡಲ್ಪಟ್ಟಿರಲಿಲ್ಲ.

## ಸಬ್ಬತ್ ಆರಾಧನೆಗಾಗಿ

## ಕೊಡಲ್ಪಟ್ಟಿತೋ?

ದೇವರು ಏಳನೆಯ ದಿನವನ್ನು ಆರಾಧನೆಯ ವಿಶೇಷ ದಿನವಾಗಿ ಕೊಟ್ಟನೆಂದು ಆದಿಕಾಂಡವು ಹೇಳುವದಿಲ್ಲ. ದೇವರು ತನ್ನ ಕೆಲಸವನ್ನು ನಿಲ್ಲಿಸಿದನು, ಆದರೆ ಏಳನೆಯ ದಿನ ಆರಾಧನೆಯನ್ನು ಆಜ್ಞಾಪಿಸಲಿಲ್ಲ (ಆದಿಕಾಂಡ 2:1-3). ದಶಾಜ್ಞೆಗಳನ್ನು ಕೊಡುವಲ್ಲಿ, ದೇವರು ಇಸ್ರಾಯೇಲ್ಯರು ವಿಶ್ರಮಿಸಿಕೊಳ್ಳಬೇಕು ಮತ್ತು ದೇವರು ತಮ್ಮನ್ನು ಐಗುಪ್ತದ ಗುಲಾಮಗಿರಿಯಿಂದ ಬಿಡಿಸಿದ್ದನ್ನು ಜ್ಞಾಪಿಸಿಕೊಳ್ಳಬೇಕು ಎಂದು ನಿರ್ದೇಶಿಸಿದನು; ಆದರೆ ಆರಾಧನೆಯ ಬಗ್ಗೆ ಏನನ್ನೂ ಹೇಳಲಿಲ್ಲ (ವಿಮೋಚನಕಾಂಡ 20:8-10; ಧರ್ಮೋಪದೇಶಕಾಂಡ 5:12-15).

ಸಬ್ಬತ್ ದಿನದ ಆರಾಧನೆಗೆ ಸಾಧ್ಯವಾದ ಉಲ್ಲೇಖಗಳು ಯೆಹೆಜ್ಕೇಲ ಮತ್ತು ಯೆಶಾಯನಲ್ಲಿ ಮಾತ್ರವೇ ಕಂಡುಬರುತ್ತವೆ, ಯೆಹೆಜ್ಕೇಲ 46 ಯೆಹೂದಿ ಯುಗದಲ್ಲಿಯ ಆರಾಧನೆಯನ್ನು ಉಲ್ಲೇಖಿಸುವದಿಲ್ಲ ಆದರೆ ಯೆಹೆಜ್ಕೇಲನು ಕಾವ್ಯ ಭಾಷೆಯಲ್ಲಿ ವಿವರಿಸಿದ ಪ್ರವಾದಿಕ ದರ್ಶನ ಮಾತ್ರ ಆಗಿರುತ್ತದೆ. ಅದು ಅಕ್ಷರಶಃವಾಗಿ ಕ್ರೈಸ್ತ ಆರಾಧನೆಗೆ ಉಲ್ಲೇಖವಲ್ಲ. ಕ್ರೈಸ್ತರು ಸಬ್ಬತ್ ದಿನದಂದು ಆರಾಧಿಸಬೇಕೆಂದು ರುಜುವಾತು ಪಡಿಸಿದರೆ, ಆಗ ಅದು ಕ್ರೈಸ್ತರು ಆಲಯದಲ್ಲಿ ಆರಾಧಿಸಬೇಕು (ವಚನ 1), ಅಮಾವಾಸ್ಯೆಯನ್ನು ಆಚರಿಸಬೇಕು (ವಚನಗಳು 1, 3), ಯಾಜಕರ ಮಧ್ಯಸ್ಥಿಕೆಯ ಮುಖಾಂತರ ಆರಾಧಿಸಬೇಕು (ವಚನ 2), ಸರ್ವಾಂಗ ಹೋಮ ಯಜ್ಞ ಅರ್ಪಿಸಬೇಕು (ವಚನಗಳು 2-7), ಯೆಹೂದಿ ಹಬ್ಬಗಳನ್ನು ಆಚರಿಸಬೇಕು (ವಚನಗಳು 9-12), ದಿನದಿನ ಯಜ್ಞಗಳನ್ನು ಅರ್ಪಿಸಬೇಕು (ವಚನಗಳು 13-15), ಮತ್ತು ವಿಮೋಚನೆಯ ವರ್ಷವನ್ನು ಕೈಕೊಳ್ಳಬೇಕು (ವಚನಗಳು 16-18).

ಕ್ರೈಸ್ತ ಯುಗದ ಆಚರಣೆಗಳನ್ನು ಛಾಯೆಯಾಗಿ ತೋರಿಸಲು ಯೆಹೂದ್ಯರ ಆಚರಣೆಗಳನ್ನು ಉಪಯೋಗಿಸಿದ ಯೆಹೂದಿ ಪ್ರವಾದಿಗಳ ಪ್ರವಾದಿಕ, ಸಾಂಕೇತಿಕ ಭಾಷೆಯಲ್ಲಿ ಯೆಹೆಜ್ಕೇಲನ ದರ್ಶನವು ಅರ್ಥಮಾಡಿಕೊಳ್ಳಲ್ಪಡತಕ್ಕದ್ದು (ಇಬ್ರಿಯ 10:1). ಅದೇ ರೀತಿಯಲ್ಲಿ, ಪ್ರಕಟನೆಯ ಗ್ರಂಥವು ಕ್ರೈಸ್ತ ಆರಾಧನೆಯ ಸಂಕೇತಗಳಂತೆ ಯೆಹೂದಿ ಆರಾಧನೆಯ ವಿಷಯಗಳನ್ನು ಉಪಯೋಗಿಸುತ್ತದೆ.

ಆರಾಧನೆಯು ಸಬ್ಬತ್ ದಿನದಂದು ಮಾತ್ರವೇ ದೇವರಿಗೆ ಅರ್ಪಿಸಲ್ಪಡತಕ್ಕದೆಂದು ಯೆಶಾಯ 66 ಹೇಳುವದಿಲ್ಲ. ವಾಕ್ಯವು ಹೀಗೆ ಹೇಳುತ್ತದೆ: "ಪ್ರತಿಯೊಂದು ಅಮಾವಾಸ್ಯೆಯಲ್ಲಿಯೂ ಒಂದೊಂದು ಸಬ್ಬತ್ ದಿನದಲ್ಲಿಯೂ ಸಕಲ ನರಜನ್ಮದವರೂ ನನ್ನ ಸನ್ನಿಧಿಯಲ್ಲಿ ಎರಗುವದಕ್ಕೆ ಬರುವರು" (ವಚನ 23) ಸಬ್ಬತ್ತಿನ ನಂತರ ಸಬ್ಬತ್ ದಿನ ಜನರು ದೇವರಿಗೆ ಅಡ್ಡ ಬೀಳುವರೆಂದು ಯೆಶಾಯನು ಹೇಳುತ್ತಿರುವದಿಲ್ಲ. "ಸಬ್ಬತ್ತಿನಿಂದ ಸಬ್ಬತ್ತಿನ ವರೆಗೆ" ಎಂದು ಹೇಳುವಲ್ಲಿ ಅವರು ಸಬ್ಬತ್‌ಗಳ ಮಧ್ಯದ ದಿನಗಳಲ್ಲಿಯೂ ಅವರು ಆರಾಧನೆ ಮಾಡುವರೆಂದು ಅರ್ಥವಾಗುವುದು.

ಇದನ್ನು ಒಬ್ಬ ಮನುಷ್ಯನು ಒಬ್ಬ ಮಹಿಳೆಗೆ, "ನೀನು ನನ್ನನ್ನು ಮದುವೆಯಾಗುವದಾದರೆ, ನಾನು ನಿನ್ನನ್ನು ಹೊಸವರ್ಷದ ದಿನದಿಂದ ಹೊಸ ವರ್ಷದ ದಿನದ ವರೆಗೆ, ಮತ್ತು ಭಾನುವಾರದಿಂದ ಭಾನುವಾರದವರೆಗೆ ಒಂದೇ ರೀತಿಯಾಗಿ ಪ್ರೀತಿಸುವೆನು" ಎಂದು ಹೇಳಿದ್ದಕ್ಕೆ ಹೋಲಿಸಬಹುದು. ಆ ದಿನಗಳಲ್ಲಿ ಮಾತ್ರವೇ ಆಕೆಯನ್ನು ಪ್ರೀತಿಸುವೆನು ಎಂಬುದು ಅವನ ಅರ್ಥವಲ್ಲ, ಆದರೆ ಅವನು ಆ ದಿನಗಳಲ್ಲಿಯೂ ಮತ್ತು ಮಧ್ಯದಲ್ಲಿಯ ಪ್ರತಿಯೊಂದು ದಿನವೂ ಪ್ರೀತಿಸುವನು ಎಂದರ್ಥವಾಗುವುದು. ದೇವರು ಸತತವಾಗಿ

ಗೌರವಿಸಲ್ಪಡುವನು ಎಂಬುದು ಯೆಶಾಯನ ಪ್ರವಾದನೆಯ ಅರ್ಥವಾಗಿದೆ.

ಕ್ರೈಸ್ತ ಯುಗದಲ್ಲಿ ಸಬ್ಬತ್‌ನ್ನು ಕೈಕೊಳ್ಳಬೇಕೆಂದು ಈ ವಾಕ್ಯವು ಬೋಧಿಸಿದರೆ, ಆಗ ಕ್ರೈಸ್ತರು ಯೆಹೂದ್ಯರ ವಿಶೇಷ ದಿನಗಳಾದ ಅಮಾವಾಸ್ಯೆಗಳನ್ನೂ ಸಹ ಕೈಕೊಳ್ಳ ಬೇಕಾಗುತ್ತದೆ. ಅದು ಜನರು ಅಮಾವಾಸ್ಯೆಗಳನ್ನೂ, ಪ್ರತೀ ಸಬ್ಬತ್ತಿನಂದು ವಿಶ್ರಾಂತಿ ಪಡೆಯಬೇಕೆಂದೂ ಇಲ್ಲವೇ ಪ್ರತೀ ಸಬ್ಬತ್‌ನಂದು ಅರಾಧಿಸಬೇಕೆಂದೂ ಹೇಳುವದಿಲ್ಲ. ಅದು ಅವರು ದೇವರ ಮುಂದೆ "ಅಡ್ಡ ಬೀಳುವರು" ಎಂದು ಹೇಳುವದಾಗಿ ಹೇಳುವಲ್ಲಿ, ವಾರ ವಾರವೂ ಅವರು ದೇವರನ್ನು ಗೌರವಿಸಿ ವಿಧೇಯರಾಗುವರು ಎಂಬುದನ್ನು ತೋರಿಸುತ್ತದೆ.

ಸಬ್ಬತ್ತನ್ನು "ಪರಿಶುದ್ಧವಾಗಿಡಬೇಕೆಂದು" ದೇವರು ಆಜ್ಞಾಪಿಸಿದನು ವಿಮೋಚನ ಕಾಂಡ 20:8; 31:14, 15). ಇದರ ಅರ್ಥ "ಪ್ರತ್ಯೇಕವಾಗಿ ಇಡು" ಎಂದಾಗುತ್ತದೆ. ಅದನ್ನು ಹೇಗೆ ಪ್ರತ್ಯೇಕವಾಗಿ ಇಡಬೇಕೆಂಬುದು ಆಜ್ಞೆಯಲ್ಲಿ ವಿವರಿಸಲ್ಪಟ್ಟಿದೆ:

> "ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು. ಏಳನೆಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ; ಅದರಲ್ಲಿ ನೀನು ಯಾವ ಕೆಲಸವನ್ನೂ ಮಾಡಬಾರದು, ನಿನ್ನ ಗಂಡುಮಕ್ಕಳು ಹೆಣ್ಣು ಮಕ್ಕಳು, ಗಂಡಾಳು ಹೆಣ್ಣಾಳು ಪಶುಗಳು ನಿನ್ನ ಊರಲ್ಲಿರುವ ಅನ್ಯದೇಶದವರು ಯಾವ ಕೆಲಸವನ್ನೂ ಮಾಡಬಾರದು" (ವಿಮೋಚನಕಾಂಡ 20:9, 10).

ಹೀಗೆಂದೂ ನಾವು ಓದುತ್ತೇವೆ,

> " 'ಆರು ದಿನಗಳು ಕೆಲಸ ಮಾಡಬೇಕು; ಏಳನೆಯ ದಿವಸ ಸಂಪೂರ್ಣವಾಗಿ ಕೆಲಸವನ್ನುನಿಲ್ಲಿಸಬೇಕಾದ ಸಬ್ಬತ್ ದಿನವಾಗಿದೆ. ಅದು ಯೆಹೋವನಿಗೆ ಪರಿಶುದ್ಧ ವಾದ ದಿನ; ಇಂಥ ಸಬ್ಬತ್ ದಿನದಲ್ಲಿ ಕೆಲಸವೇನಾದರೂ ಮಾಡುವವನಿಗೆ ಮರಣಶಿಕ್ಷೆಯಾಗಬೇಕು' " (ವಿಮೋಚನಕಾಂಡ 31:15).

ಸಬ್ಬತ್ ದಿನವನ್ನು ಪರಿಶುದ್ಧವಾಗಿಟ್ಟು ಕೊಳ್ಳುವುದು ಕೆಲಸ ಮಾಡದೆ ಇದ್ದು ಒಂದು ದಿನವನ್ನು ವಿಶ್ರಾಂತಿಯ ದಿನವೆಂದು ಆಚರಿಸುವುದು ಆಗಿತ್ತು, ಆರಾಧನೆ ಮತ್ತು ಯಜ್ಞ, ಇಸ್ರಾಯೇಲ್ಯರಲ್ಲಿ ಅನುದಿನದ ಚಟುವಟಿಕೆಗಳು ವಿಶೇಷವಾಗಿ ಸಬ್ಬತ್ತಿನೊಂದಿಗೆ ಸಂಬಂಧಿಸಿರಲಿಲ್ಲ.

ಸಬ್ಬತ್ ದಿನದಂದು ಆರಾಧನೆಗಾಗಿ ಸಭೆಯಾಗಿ ಕೂಡಿ ಬರಬೇಕೆಂದು ಇಸ್ರಾ ಯೇಲ್ಯರು ಆಜ್ಞಾಪಿಸಲ್ಪಟ್ಟಿರಲಿಲ್ಲ. "ಸಬ್ಬತ್ ದಿನದ ಪ್ರಯಾಣದ" ಸಾಂಪ್ರದಾಯಕ ಪ್ರಮಾಣದ ಮಿತಿಯ ಕಾರಣದಿಂದ, (ಸುಮಾರು ಒಂದು ಮೈಲಿನ ಐದರಲ್ಲಿ ಮೂರು ಭಾಗದಷ್ಟು) ಯೆರೂಸಲೇಮಿನಲ್ಲಿ ಇಲ್ಲವೇ ಅದಕ್ಕೆ ಸಮೀಪದಲ್ಲಿ ಇದ್ದವರು ಸಬ್ಬತ್ತಿ ನಂದು ಆರಾಧನೆಗಾಗಿ ಕೂಡಿಬರಲು ಶಕ್ತರಾಗಿದ್ದರು.

ದೇವರು ಇಸ್ರಾಯೇಲ್ಯರಿಗೆ ದಶಾಜ್ಞೆಗಳನ್ನು ಕೊಟ್ಟ ಮೇಲೆ ಅನೇಕ ವರ್ಷಗಳು ದಾಟಿಹೋಗುವವರೆಗೆ ಸಬ್ಬತ್ತು ಬಹಿರಂಗ ಕೂಟಕ್ಕೆ ದಿನವಾಗಿ ಮಾಡಲ್ಪಟ್ಟಿರಲಿಲ್ಲ. ದೇವಾಲಯವು ನಾಶಪಡಿಸಲ್ಪಟ್ಟಾಗ, ಮತ್ತು ಬಬಿಲೋನಿಗೆ ಯೆಹೂದ್ಯರು ಸೆರೆಯಾಗಿ ಒಯ್ಯಲ್ಪಟ್ಟಾಗ, ಪರಿಶುದ್ಧ ಬರಹಗಳನ್ನು ಬಹಿರಂಗವಾಗಿ ಓದುವದಕ್ಕಾಗಿ ಸಭಾ ಮಂದಿರಗಳು ಕಟ್ಟಲ್ಪಟ್ಟವು. "ಸೆರೆಯ ಕಾಲದಲ್ಲಿ ಸಭಾ ಮಂದಿರದ ಬೆಳವಣಿಗೆಯಿಂದ,

ಸಬ್ಬತ್ ದಿನವು ಆರಾಧನೆಯ ಮತ್ತು ಧರ್ಮಶ್ತ್ರಾದ ಅಧ್ಯಯನದ ಹಾಗೆಯೆ ವಿಶ್ರಾಂತಿ ದಿನವಾಯಿತು."[1]

ಇದರ ಮೊದಲು ಇಸ್ರಾಯೇಲ್ಯರಿಗೆ ಆರಾಧನೆಗಾಗಿ ದೇವರು ಆಯ್ದುಕೊಂಡ ಸ್ಥಳದಲ್ಲಿ ಅಂದರೆ ಯೆರೂಸಲೇಮಿನಲ್ಲಿ ಮಾತ್ರವೇ ಅವರು ಆರಾಧಿಸಿದರು.[2] ಅವರಿಗೆ ಹೀಗೆ ಹೇಳಲ್ಪಟ್ಟಿತು,

> ನೀವು ಕಂಡ ಕಂಡ ಸ್ಥಳಗಳಲ್ಲಿ ಸರ್ವಾಂಗ ಹೋಮಗಳನ್ನು ಸಮರ್ಪಿಸಬಾರದು, ನೋಡಿಕೊಳ್ಳಿರಿ. ನಿಮ್ಮ ಕುಲಗಳಲ್ಲಿ ಯಾವುದೋ ಒಂದು ಕುಲದಲ್ಲಿ ಯೆಹೋವನು ಆದುಕೊಳ್ಳುವ ಸ್ಥಳದಲ್ಲೇ ನಿಮ್ಮ ಸರ್ವಾಂಗ ಹೋಮ ಗಳನ್ನು ಸಮರ್ಪಿಸ ಬೇಕು; ಅಲ್ಲಿಯೇ ನಾನು ಅಜ್ಞಾಪಿಸಿದ ಎಲ್ಲಾ ಆಚಾರಗ ಳನ್ನು ನಡಿಸಬೇಕು (ಧರ್ಮೋಪದೇಶಕಾಂಡ 12:13, 14).

"ದೇವಾರಧನೆಗಾಗಿ ಕೂಡಿಬರಬೇಕು" ಎಂದು ಯಾಜಕಕಾಂಡ 23:2ರಲ್ಲಿ ಹೇಳಲ್ಪಟ್ಟಿದೆ. ಎಲ್ಲಿ ಮತ್ತು ಯಾಕೆ ಜನರು ಕೂಡಿ ಬರಬೇಕೆಂದು ಏನೂ ಹೇಳಲ್ಪಟ್ಟಿರುವದಿಲ್ಲ. ಸಬ್ಬತ್ ದಿನದ ಸಾಂಪ್ರದಾಯವು ಇಡೀ ಜನಾಂಗವು ಇಲ್ಲವೇ ದೊಡ್ಡ ಪಟ್ಟಣದಲ್ಲಿಯ ಎಲ್ಲಾ ಜನರೂ ಕೂಡಿಬರುವದಕ್ಕೆ ಆತಂಕವನ್ನೊಡ್ಡುತ್ತದೆ. ಸಬ್ಬತ್‌ನ್ನು ಆಚರಿಸಲು ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಆಜ್ಞೆಯು, "ನಿಮ್ಮಲ್ಲಿ ಪ್ರತಿಯೊಬ್ಬನು ತಾನಿರುವಲ್ಲಿಯೇ ಇರಬೇಕು, ಏಳನೆಯ ದಿನದಲ್ಲಿ ಒಬ್ಬನೂ ತನ್ನ ಸ್ಥಳವನ್ನು ಬಿಟ್ಟು ಹೊರಗೆ ಹೋಗಕೂಡದು" (ವಿಮೋಚನಕಾಂಡ 16:29ಬಿ) ಎಂದು ಹೇಳಿತು. ಈ ಆಜ್ಞೆಯು ಕುಟುಂಬದವರು ಕೂಡಿ ಬರುವಿಕೆಗೆ ಮಿತಿಗೊಂಡಿರುವುದು. ಯಾಜಕಕಾಂಡ 23:3ರಲ್ಲಿ "ದೇವಾರಾಧನೆಗಾಗಿ ಕೂಡಿಬರುವುದು" ಎಂಬ ಮಾತು "ಸಂಪೂರ್ಣ ವಿಶ್ರಾಂತಿ" ಎಂಬುದನ್ನು ಒತ್ತಿ ಹೇಳುತ್ತದೆ, ಇದರ ಅರ್ಥ ದೇವಾರಾಧನೆಗಾಗಿ ಕೂಡಿಬರುವ ಕುಟುಂಬದವರಿಗೆ ವಿಶ್ರಾಂತಿಗಾಗಿ ಸಮಯವಾಗಿರುವುದು.

## ಯೇಸು ಮತ್ತು ಸಬ್ಬತ್

ಯೇಸುವು ಧರ್ಮಶಾಸ್ತ್ರದ ಅಧೀನತೆಯಲ್ಲಿ ಜನಿಸಿದನು (ಗಲಾತ್ಯ 4:4). ಈ ಕಾರಣದಿಂದ, ಸಬ್ಬತ್‌ನ್ನೊಳಗೊಂಡು ಧರ್ಮಶಾಸ್ತ್ರದ ಆಜ್ಞೆಗಳನ್ನು ಕೈಕೊಂಡನು.

ಸಬ್ಬತ್ ದಿನದಂದು ಯೇಸು ರೋಗಿಗಳನ್ನು ವಾಸಿಮಾಡಿದಾಗ, ಯೆಹೂದ್ಯರು ಗಲಿಬಿಲಿಗೊಂಡರು ಯಾಕಂದರೆ ಯೇಸುವು ಅವರ ಸಾಂಪ್ರದಾಯಗಳಂತೆ ಆತನು ಸಬ್ಬತ್‌ನ್ನು ಕೈಕೊಳ್ಳುತ್ತಿರಲಿಲ್ಲ. ಸಬ್ಬತ್ತಿನ ಒಡೆಯನಾಗಿ, ಏಳನೆಯ ದಿನದ ವಿಶ್ರಾಂತಿಯ ಅರ್ಥವನ್ನು ಆತನು ಅರಿತು ಕೊಂಡಿದ್ದನು. ಸಬ್ಬತ್ ದಿನದಂದು ತನ್ನ ಶಿಷ್ಯರು ಗೋದಿ ತೆನೆಗಳನ್ನು ಮುರಿದು ಕೊಂಡು ತಿನ್ನಲು ಬಿಡುವದರಿಂದ (ಮತ್ತಾಯ 12:1-8; ಮಾರ್ಕ 2:23-28; ಲೂಕ 6:1-5), ಆತನು "ಸಬ್ಬತ್ ದಿನದ ಮೇಲೆ ತನ್ನ ಅಧಿಕಾರವನ್ನು ಸಾಧಿಸಿದನು, ಆತನು, ಫರಿಸಾಯರಲ್ಲ, ದಿನದ ಯೋಗ್ಯ ಆಚರಣೆಯ ಬಗ್ಗೆ ಆಳಬಹುದು."[3]

ಸಬ್ಬತ್ ದಿನದಂದು, ಯೇಸುವು ಕೈಬಾಡಿ ಹೋದ ಮನುಷ್ಯನನ್ನು ಗುಣಪಡಿಸಿದನು (ಮತ್ತಾಯ 12:10-13; ಮಾರ್ಕ 3:1-5; ಲೂಕ 6:6-10); ನಡುಬೊಗ್ಗಿ ಹೋದವಳನ್ನು (ಲೂಕ 13:11-16); ಜಲೋದರವುಳ್ಳ ಮನುಷ್ಯನನ್ನು (ಲೂಕ 14:1-5); ಬೆತ್ಸಾಯಿದ ಕೊಳದ ಬಳಿಯಲ್ಲಿ ರೋಗಿಯಾಗಿದ್ದ ಮನುಷ್ಯನನ್ನು, ಸಬ್ಬತ್ ದಿನದಂದು

ಅವನಿಗೆ ತನ್ನ ಹಾಸೆಗೆಯನ್ನು ಹೊತ್ತು ಕೊಂಡು ಹೋಗು ಎಂದು ಹೇಳಿದನು (ಯೋಹಾನ 5:1-8; 7:19-23); ಮತ್ತು ಒಬ್ಬ ಕುರುಡನನ್ನು (ಯೋಹಾನ 9:1-7) ಗುಣಪಡಿಸಿದನು. ಸಬ್ಬತ್ ದಿನಗಳಲ್ಲಿ ಒಳ್ಳೆಯದನ್ನು ಮಾಡುವುದು ಸರಿಯಾಗಿದೆ ಎಂದು ತನ್ನನ್ನು ಟೀಕಿಸಿದವರಿಗೆ ಆತನು ಹೇಳಿದನು (ಮತ್ತಾಯ 12:12). ಸಬ್ಬತ್ ದಿನವು ಮನುಷ್ಯನಿಗಾಗಿ ಮಾಡಲ್ಪಟ್ಟಿದೆ, ಆದರೆ ಮನುಷ್ಯನು ಸಬ್ಬತ್ತಿಗಾಗಿ ಅಲ್ಲ ಎಂದು ಆತನು ಹೇಳಿದನು (ಮಾರ್ಕ 2:27).

ಯೇಸುವು ಸಬ್ಬತ್ ದಿನದಲ್ಲಿ ರೋಗಿಗಳನ್ನು ವಾಸಿಮಾಡಿದ್ದಲ್ಲದೇ, ಏಳನೆಯ ದಿನದಂದು ಯೆಹೂದಿ ಸಭಾಮಂದಿರಗಳಲ್ಲಿ ಆತನು ಬೋಧಿಸಿದನು (ಮಾರ್ಕ 1:21; 6:2; ಲೂಕ 4:16, 31; 6:6; 13:10). ಹೀಗಿದ್ದರೂ, ಯೇಸು ಮತ್ತು ಯೆಹೂದ್ಯರ ಮಧ್ಯದಲ್ಲಿ ಘರ್ಷಣೆ ಉಂಟಾಯಿತು, ಯಾಕಂದರೆ ಆತನು ಫರಿಸಾಯರ ಸಾಂಪ್ರದಾಯಗಳನ್ನು ಮೀರಿದನು, "ಸಬ್ಬತ್ ದಿನದಂದು ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಸ್ಪಷ್ಟವಾಗಿ ವಿವರಿಸಲು ಪ್ರಯತ್ನಿಸಿದರು. ಮಿಶ್ನಾ. ಸಬ್ಬತ್ತ vii 2, ಸಬ್ಬತ್ ದಿನದಂದು ಪ್ರತಿಬಂಧಿಸಲ್ಪಟ್ಟ ಮೂವತ್ತೊಂಭತ್ತು ಕೆಲಸಗಳ ಯಾದಿಯನ್ನು ಒದಗಿಸಿಕೊಟ್ಟಿತು, ... ."[4]

ಯೇಸು ಮತ್ತು ಆತನ ಶಿಷ್ಯರು ಫರಿಸಾಯರ ಯಾದಿಯನ್ನು ಮೀರಿದರು; ತೆನೆಗಳಿಂದ ಕಾಳು ಹೊಸಗಿ ತಿನ್ನುವುದು ಪ್ರತಿಬಂಧಿಸಲ್ಪಟ್ಟಿತು (ಮಾರ್ಕ 2:23, 24), ಮರಣದ ಗಂಡಾಂತರದಲ್ಲಿ ಇಲ್ಲದವರಿಗೆ ಸಹಾಯ ಮಾಡಬಾರದು ಇಲ್ಲವೇ ಗುಣಪಡಿಸಲ್ಪಡಬಾರದು (ಮಾರ್ಕ 3:1), ಮತ್ತು ವಸ್ತುಗಳನ್ನು ತೆಗೆದು ಕೊಂಡು ಹೋಗ ಬಾರದು (ಯೋಹಾನ 5:9, 10).[5] ಅಂಥ ಸಂಗತಿಗಳನ್ನು ಎದುರಿಸಿದಾಗ, ಯೇಸುವು ತಾನು ಸಬ್ಬತ್ ದಿನದಲ್ಲಿ ಕೆಲಸ ಮಾಡುತ್ತಾನೆ ಮತ್ತು ತಂದೆಯೂ ಸಹ ಕೆಲಸ ಮಾಡುವನು ಎಂದು ಉತ್ತರ ಕೊಟ್ಟನು (ಯೋಹಾನ 5:17).

ಕ್ರೈಸ್ತರು ಸಬ್ಬತ್ ದಿನವನ್ನು ಕೈಕೊಳ್ಳಬೇಕೆಂದು ಯೇಸುವು ಸೂಚಿಸಿದನೋ? ಆತನು ಸೂಚಿಸಿದನೆಂದು ಕೆಲವರು ಹೇಳುತ್ತಾರೆ. ಯಾಕಂದರೆ ಯೇಸುವು "ಆದರೆ ನಿಮ್ಮ ಪಲಾಯನವು ಚಳಿಗಾಲದಲ್ಲಿಯಾಗಲಿ, ಸಬ್ಬತ್ ದಿನದಲ್ಲಿಯಾಗಲಿ ಆಗ ಬಾರದೆಂದು ಪ್ರಾರ್ಥನೆ ಮಾಡಿರಿ" (ಮತ್ತಾಯ 24:20) ಎಂದು ಹೇಳಿದ್ದಾನೆಂದು ಹೇಳು ತ್ತಾರೆ. ಯೇಸು ಯಾಕೆ ಎಂದು ವಿವರಿಸಲಿಲ್ಲ ಆದರೆ ನಾವು ಊಹಿಸಿಕೊಳ್ಳಬೇಕು. "ಸಬ್ಬತ್ ದಿನದ ಪ್ರಯಾಣವನ್ನು" ಕುರಿತ ಸಾಂಪ್ರದಾಯವು ಯಾವುದೇ ದೂರ ಪ್ರಯಾಣ ಮಾಡುವದರಿಂದ ತಡೆಯಿತೇ ಇಲ್ಲವೇ ಸಬ್ಬತ್ ದಿನದಂದು ಯೆರೂಸ ಲೇಮಿನ ದ್ವಾರಗಳು ಮುಚ್ಚಲ್ಪಟ್ಟಿರುವದರಿಂದ ಅವರು ತಪ್ಪಿಸಿಕೊಂಡು ಹೋಗುವುದು ತಡೆಯಲ್ಪಟ್ಟಿತೋ? ನೇರವಾದ ಕಾರಣವು ಕ್ರೈಸ್ತರು ಈ ಪರಿಸ್ಥಿತಿಯಲ್ಲಿ ಗಂಭೀರವಾದ ಗಂಡಾಂತರದಲ್ಲಿ ಇರುವುದಾಗಿದೆ. ಸಬ್ಬತ್ ದಿನದಂದು ಭಾರ ಹೊತ್ತುಕೊಂಡು ಹೋಗುವವನಿಗೆ ಕಲ್ಲೆಸೆಯ ಬಹುದು, ಸಬ್ಬತ್ ದಿನದಂದು ಕಟ್ಟಿಗೆ ಕೂಡಿಸಿದ್ದಕ್ಕಾಗಿ ಒಬ್ಬ ಮನುಷ್ಯನು ಕಲ್ಲೆಸೆದು ಕೊಲ್ಲಲ್ಪಟ್ಟನು (ಅರಣ್ಯಕಾಂಡ 15:32, 36).

> ಮನಮುಟ್ಟಿ, ಗಮನಿಸಿರಿ, "ಸಬ್ಬತ್ ದಿನದಲ್ಲಿ ಯಾವ ಹೊರೆಯನ್ನೂ ಹೊರ ಬೇಡಿರಿ, ಯೆರೂಸಲೇಮಿನ ಬಾಗಿಲುಗಳಲ್ಲಿ ತರಲೇ ಬೇಡಿರಿ; ಆ ದಿನದಲ್ಲಿ ನಿಮ್ಮ ಮನೆಗಳಿಂದ ಯಾವ ಹೊರೆಯನ್ನೂ ಈಚೆಗೆ ತೆಗೆದುಕೊಂಡು ಬರ ಬೇಡಿರಿ, ಯಾವ ಕೆಲಸವನ್ನೂ ಮಾಡದಿರಿ; ಸಬ್ಬತ್ ದಿನವನ್ನು ನನ್ನ ದಿನವೆಂದು ಆಚರಿಸಿರಿ; ನಿಮ್ಮ ಪಿತೃಗಳಿಗೆ ನಾನು ಹೀಗೆ ಆಜ್ಞೆ ಮಾಡಿದೆನಲ್ಲಾ" (ಯೆರೆಮೀಯ

17:21, 22).

ಚಳಿಗಾಲದಲ್ಲಿ ಇಲ್ಲವೇ ಸಬ್ಬತ್ ದಿನದಲ್ಲಿ ಓಡಿಹೋಗಲು ಕ್ರೈಸ್ತರಿಗೆ ಒತ್ತಾಯಿಸಲ್ಪಟ್ಟಿದ್ದರೆ ಪಲಾಯನವು ಕಠಿಣವಾದದ್ದಾಗುತ್ತಿತ್ತು. ಚಳಿಗಾಲವು ತಂಪುಗಾಳಿಯನ್ನೂ ಮಳೆಯನ್ನೂ ಹಿಮವನ್ನೂ ಸಹ ತರಬಹುದು ಮತ್ತು ಸಬ್ಬತ್ ದಿನದಂದು ಸಾಂಪ್ರದಾಯಗಳನ್ನೂ ನಿಯಮಗಳನ್ನೂ ಮುರಿದದ್ದಕ್ಕಾಗಿ ಯೆಹೂದ್ಯರಿಂದ ಆತಂಕಗಳನ್ನು ಎದುರಿಸ ಬೇಕಾಗುವುದು.

ಚಳಿಗಾಲದಲ್ಲಿ ಇಲ್ಲವೇ ಸಬ್ಬತ್ ದಿನದಂದು ತಪ್ಪಿಸಿಕೊಂಡು ಹೋಗಲಿಕ್ಕೆ ಇರುವ ಸಮಸ್ಯೆಗಳನ್ನು ಕುರಿತು ಆರ್. ಸಿ. ಎಚ್. ಲೆನ್‌ಸ್ಕಿ ಇದನ್ನು ಹೇಳಿದ್ದಾರೆ:

> ... ಪಾಲೆಸ್ತೀನದ ಚಳಿಗಾಲದಲ್ಲಿ ತಂಪು ಮತ್ತು ಹಸಿಯಾಗಿರುವಿಕೆ ಹಾಗೂ "ನಿಮ್ಮ ಓಡುಹೋಗುವಿಕೆಯು" ಆ ಸಮಯದಲ್ಲಿ ಸಂಭವಿಸುವ ಸಾಧ್ಯತೆ ಇಲ್ಲವೇ ಅದು "ಸಬ್ಬತ್" ದಿನದಂದು, ದೇಶವು ಧರ್ಮಭ್ರಾಂತರಾದ ಯೆಹೂದ್ಯರಿಂದ ತುಂಬಿಕೊಂಡಿರುವಾಗ, ಸಬ್ಬತ್ ದಿನವು ಹೊಲೆ ಮಾಡಲ್ಪಡುವುದೆಂದು ಕಲ್ಪಿಸಿಕೊಂಡು ರೋಷಗೊಳ್ಳುವವರಾಗಬಹುದು ಈ ಸಮಯದಲ್ಲಿ ಕ್ರೈಸ್ತರು ಇನ್ನೂ ಯೆಹೂದಿ ನಿಯಮಗಳನ್ನು ಕೈಕೊಳ್ಳುತ್ತಿದ್ದಾಗ, ಸಬ್ಬತ್ ದಿನದ ಬಗೆಗೂ ಹೇಳಲಿಕ್ಕಾಗದಿರದು.[6]

ಡಿ. ಎ. ಕಾರ್ಸನ್ ವಿವರಿಸಿದ್ದಾನೆ,

> ತಪ್ಪಿಸಿಕೊಳ್ಳುವದನ್ನೊಳಗೊಂಡು ಯಾವದೇ ರೀತಿಯ ಪ್ರಯಾಣವು ಸಬ್ಬತ್ ದಿನದಂದು ತಪ್ಪಾಗಿದೆಯೆಂದು ಯೇಸುವಿನ ಅರ್ಥವಾಗಿದೆಯೆಂದು ತೆಗೆದು ಕೊಳ್ಳಬಾರದು. ಸಬ್ಬತ್ ದಿನದಂದು ತಪ್ಪಿಸಿಕೊಂಡು ಹೋಗುವದನ್ನು ನಿಲ್ಲಿಸಬೇಕೆಂದೂ ಆತನು ಸೂಚಿಸುವುದಿಲ್ಲ. ಆದರೆ ಅವರು ತಪ್ಪಿಸಿಕೊಂಡು ಹೋಗಬಹುದೆಂದು ಊಹಿಸಿಕೊಂಡರೆ, ಅವರ ಓಡಿಹೋಗುವಿಕೆಯು ಇನ್ನೊಂದು ಬೇರೆ ದಿನದಂದು ಆಗಲಿ ಎಂದು ಪ್ರಾರ್ಥಿಸಲು ಅವರಿಗೆ ಬೋಧಿ ಸಿದನು. ಮೆಲೆ ಕೂಡಿಸುವ ತಾಯಂದಿರ (24:19) ಮತ್ತು ಚಳಿಗಾಲದ ಮಳೆ ಮತ್ತು ಚಳಿ (24:20ಎ) ಅವರನ್ನು ನಿಧಾನವಾಗಿಸಬಹುದು ಹಾಗೂ ಜೀವ ಕಳೆದು ಕೊಳ್ಳಲು ಕಾರಣವಾಗಬಹುದು ಮತ್ತು ಸಬ್ಬತ್ ನಿಯಮಗಳನ್ನು ಉಲ್ಲಂಘಿಸಬಹುದು ಯಾಕಂದರೆ ಪಟ್ಟಣದ ದ್ವಾರಗಳು ಮುಚ್ಚಿರುವವು, ಅಂಗಡಿಗಳು ತೆರೆದಿರುವುದಿಲ್ಲ ಮತ್ತು ಸಬ್ಬತ್ ದಿನದಂದು ಪ್ರಯಾಣ ಮಾಡುವ ನಿಯಮ ಮೀರಿದ್ದಕ್ಕೆ ತೊಂದರೆಗಳು ಕಾದಿರಬಹುದು.[7]

ಈ ಹೇಳಿಕೆಯಿಂದ ಕ್ರೈಸ್ತರು ಸಬ್ಬತ್‌ನ್ನು ಆಚರಿಸಬೇಕೆಂದು ಕ್ರೈಸ್ತರಿಗೆ ಯೇಸುವು ಸೂಚಿಸಿದನೆಂದು ಸಿದ್ಧಪಡಿಸಲ್ಪಟ್ಟರೂ ಅಂಥದ್ದೂ ಸಬ್ಬತ್ ದಿನದಂದು ಕೆಲಸವನ್ನಾಗಲೀ, ಪ್ರಯಾಣವನ್ನಾಗಲೀ ಮಾಡಬಾರದು ಎಂಬುದನ್ನಷ್ಟೇ ಸಿದ್ಧಪಡಿಸಿ ತೋರಿಸುತ್ತದೆ. ಸಬ್ಬತ್ ದಿನದಂದು ಕ್ರೈಸ್ತರು ಆರಾಧಿಸಬೇಕು ಎಂಬುದನ್ನು ಅದು ಸಿದ್ಧಪಡಿಸುವದಿಲ್ಲ, ಯಾಕಂದರೆ ಈ ಹೇಳಿಕೆಯು ಸಬ್ಬತ್ ದಿನದಂದು ಪ್ರಯಾಣಕ್ಕೆ ಮಾತ್ರ ಸಂಬಂಧಿಸುತ್ತದೆ ಆದರೆ ಆರಾಧನೆಗಾಗಿ ಅಲ್ಲ. ಇದಲ್ಲದೇ, ಯೆಹೂದಿ ಕ್ರೈಸ್ತರು ಮಾತ್ರವೇ - ಅನ್ಯ ಕ್ರೈಸ್ತರಲ್ಲ - ಸಬ್ಬತ್‌ನ್ನು ಆಚರಿಸಬೇಕೆಂಬುದನ್ನು ಹೇಳುತ್ತದೆ. ಸಬ್ಬತ್ ನಿಯಮವು ಯೆಹೂದ್ಯರ ರಾಷ್ಟ್ರೀಯ ನಿಯಮವಾಗಿತ್ತು, ಇಸ್ರಾಯೇಲಿನ

ಹೊರಗಿರುವವರಿಗೆ ಬಂಧಿಸುವ ನಿಯಮವಾಗಿರಲಿಲ್ಲ.

ಸಬ್ಬತ್ತು ಎಂದೆಂದಿಗೂ ಇರಬೇಕಾದದ್ದಾಗಿರಲಿಲ್ಲ. ಇಸ್ರಾಯೇಲನ್ನು ಕುರಿತು ದೇವರು ಹೋಶೇಯನ ಮುಖಾಂತರ ಪ್ರವಾದಿಸಿದನು, "ನಾನು ಅವಳ ಉಲ್ಲಾಸ, ಹಬ್ಬ, ಅಮಾವಾಸ್ಯೆ, ಸಬ್ಬತ್ತು, ಮಹೋತ್ಸವ, ಇವುಗಳನ್ನೆಲ್ಲಾ ನಿಲ್ಲಿಸಿಬಿಡುವೆನು" (ಹೋಶೇಯ 2:11). ಇಸ್ರಾಯೇಲು ದೇಶವು ರೋಮನ್‌ರಿಂದ ಸೋಲಿಸಲ್ಪಟ್ಟಾಗ ಮತ್ತು ಯೆರೂಸಲೇಮ ಪತನವಾದಾಗ (ಕ್ರಿ.ಶ. 70) ಈ ಪ್ರವಾದನೆಯು ನೆರವೇಲಿರಬೇಕು.

## ಅಪೊಸ್ತಲರ ಕೃತ್ಯಗಳಲ್ಲಿ ಸಬ್ಬತ್

ಅಪೊಸ್ತಲರ ಕೃತ್ಯಗಳಲ್ಲಿ ಮೊದಲಿನ ಹದಿಮೂರು ಅಧ್ಯಾಯಗಳಲ್ಲಿ "ಸಬ್ಬತ್ ದಿನದ ಪ್ರಯಾಣಕ್ಕೆ" (ಅಪೊಸ್ತಲರ ಕೃತ್ಯಗಳು 1:12) ಸಂಬಂಧಿಸಿ ಹೇಳಲ್ಪಟ್ಟಿದೆ. ಒಂದು ಮೈಲಿನಲ್ಲಿ ಐದರಲ್ಲಿ ಮೂರು ಭಾಗದಷ್ಟು ದೂರಕ್ಕಿಂತ ಹೆಚ್ಚು ಇಲ್ಲವೇ ಕೆಲವು ಸಂದರ್ಭಗಳಲ್ಲಿ ಅದರ ಎರಡು ಪಟ್ಟು ಹೆಚ್ಚು ದೂರ ಪ್ರಯಾಣ ಮಾಡುವದನ್ನು ಯೆಹೂದಿ ಸಾಂಪ್ರದಾಯ ಪ್ರತಿಬಂಧಿಸಿತ್ತು ಅಪೊಸ್ತಲರ ಕೃತ್ಯದಲ್ಲಿಯಾಗಲೀ ಇಲ್ಲವೇ ಹೊಸ ಒಡಂಬಡಿಕೆಯ ಇತರ ಯಾವುದೇ ಪುಸ್ತಕದಲ್ಲಿಯಾಗಲೀ ಕ್ರೈಸ್ತರು ಸಬ್ಬತ್‌ನಂದು ವಿಶ್ರಮಿಸಿದ್ದಾಗಲೀ ಇಲ್ಲವೇ ಆರಾಧನೆಗಾಗಿ ಕೂಡಿಬಂದದ್ದಾಗಲೀ ನಮೂದಿಸಲ್ಪಟ್ಟಿರುವದಿಲ್ಲ.

ಸಬ್ಬತ್ತಿನಂದು ಸಭಾಮಂದಿರಗಳಲ್ಲಿ, ಯೆಹೂದ್ಯರು ಕೂಡಿ ಬರುತ್ತಿದ್ದ ಸ್ಥಳ ಮತ್ತು ದಿನದಂದು ಪೌಲನು ಪ್ರಸಂಗಿಸಿದನು (ಅಪೊಸ್ತಲರ ಕೃತ್ಯಗಳು 13:14, 42, 44; 16:13; 17:2; 18:4). ಹೀಗಿದ್ದರೂ ಸಬ್ಬತ್ ದಿನದಂದು ಸಭೆಯೊಂದಿಗೆ ಇಲ್ಲವೇ ಸಭೆಯನ್ನು ಸಬ್ಬತ್‌ನಂದು ಅವನು ಸಂಧಿಸಿದನೆಂದು ಎಲ್ಲಿಯೂ ಸೂಚನೆ ಕಂಡುಕೊಳ್ಳುವದಿಲ್ಲ. ಸಬ್ಬತ್ತಿನಂದು ಮೋಶೆಯ ಮತ್ತು ಪ್ರವಾದಿಗಳ ಓದುವಿಕೆಯು ಯೆಹೂದಿ ಪದ್ಧತಿ ಇತ್ತೆಂದೂ ಹೇಳಲಾಗಿದೆ (ಅಪೊಸ್ತಲರ ಕೃತ್ಯಗಳು 15:21; ನೋಡಿರಿ 13:27).

ಪೌಲ ಮತ್ತು ಬಾರ್ನಬರು, ಅನ್ಯರು ಯೆಹೂದಿ ನಿಯಮಗಳನ್ನು ಅನುಸರಿಸ ಬೇಕೋ ಎಂಬುದನ್ನು ತಿಳಿದುಕೊಳ್ಳಲು ಅಪೊಸ್ತಲರನ್ನು ಮತ್ತು ಹಿರಿಯರನ್ನು ಸಂದರ್ಶಿಸಲು ಯೆರೂಸಲೇಮಿಗೆ ಹೋದರು (ಅಪೊಸ್ತಲರ ಕೃತ್ಯಗಳು 15:1, 2). "ಅವರಿಗೆ ಸುನ್ನತಿ ಮಾಡಿಸುವ ಅಗತ್ಯತೆಯಿದೆ ಮತ್ತು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಅಪ್ಪಣೆ ಕೊಡಬೇಕು" ಎಂದು ಕ್ರೈಸ್ತರಾದ ಕೆಲವು ಜನ ಯೆಹೂದ್ಯರು ಹೇಳಿದರು (ಅಪೊಸ್ತಲರ ಕೃತ್ಯಗಳು 15:5). ಸ್ವಲ್ಪ ಚರ್ಚೆಯಾದ ನಂತರ ಪೇತ್ರನು ಹೀಗೆ ಹೇಳಿದನು: "ಹೀಗಿರುವದರಿಂದ, ನಮ್ಮ ಪಿತೃಗಳಾಗಲಿ ನಾವಾಗಲಿ ಹೊರಲಾರದ ನೊಗವನ್ನು ನೀವು ಶಿಷ್ಯರ ಹೆಗಲಿನ ಮೇಲೆ ಹಾಕಿ ದೇವರನ್ನು ಪರೀಕ್ಷಿಸುವದು ಯಾಕೆ?" (ಅಪೊಸ್ತಲರ ಕೃತ್ಯಗಳು 15:10). ಪೇತ್ರನು ನಮೂದಿಸಿದ ನೊಗವು, ಸುನ್ನತಿ ಹೊಂದಿದ ಕೆಲವು ಕ್ರೈಸ್ತರು ಅನ್ಯ ಕ್ರೈಸ್ತರ ಮೇಲೆ ಹೊರಿಸಲು ಪ್ರಯತ್ನಿಸಿದ ಸುನ್ನತಿ ಮತ್ತು ಧರ್ಮಶಾಸ್ತ್ರ ಆಗಿರಬೇಕು.

ಅನ್ಯರು ಸುನ್ನತಿ ಮಾಡಿಸಿಕೊಳ್ಳಬೇಕು ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಳ್ಳತಕ್ಕದ್ದು ಎಂದು ಒತ್ತಿ ಹೇಳಿದವನಿಗೆ ಉತ್ತರವಾಗಿ ಯಾಕೋಬನಿಂದ ಸೂಚಿಸಲ್ಪಟ್ಟ ಪತ್ರವು (ಅಪೊಸ್ತಲರ ಕೃತ್ಯಗಳು 15:5) "ನಾವು ಯಾವ ಅಪ್ಪಣೆ ಕೊಡಲಿಲ್ಲ" (ಅಪೊಸ್ತಲರ ಕೃತ್ಯಗಳು 15:24) ಇದಕ್ಕೆ ಹೆಚ್ಚಿನ ಭಾರವನ್ನು ನಿಮ್ಮ ಮೇಲೆ

ಹಾಕಬಾರದೆಂದು ಪರಿಶುದ್ಧಾತ್ಮನಿಗೂ ನಮಗೂ ವಿಹಿತವಾಗಿ ತೋರಿತು (ಅಪೊಸ್ತಲರ ಕೃತ್ಯಗಳು 15:28). ನೀವು ಎಚ್ಚರವಾಗಿದ್ದು ಇವುಗಳ ಗೊಡವೆಗೆ ಹೋಗದಿದ್ದರೆ ನಿಮಗೆ ಒಳ್ಳೇದಾಗುವದು. ಶುಭವಾಗಲಿ ಎಂದು ಹೇಳುತ್ತದೆ. ಅತ್ಯಗತ್ಯತೆಗಳು ಧರ್ಮಶಾಸ್ತ್ರದ ಕೆಲವೇ ನಿರ್ಬಂಧಗಳನ್ನು ಒಳಗೊಂಡಿದ್ದವು. ಅವು ಸುನ್ನತಿಯನ್ನು, ಇಡೀ ಧರ್ಮಶಾಸ್ತ್ರವನ್ನು ಕೈಕೊಳ್ಳುವದನ್ನು, ಇಲ್ಲವೇ ಸಬ್ಬತ್‌ನ್ನು ಕೈಕೊಳ್ಳುವದನ್ನು ಒಳಗೊಂಡಿರಲಿಲ್ಲ. ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಇಡೀ ಧರ್ಮಶಾಸ್ತ್ರವಾಗಲೀ ಇಲ್ಲವೇ ಸಬ್ಬತ್ ಆಗಲಿ, ಅಪೊಸ್ತಲರಿಂದ, ಯೆರೂಸಲೇಮಿನಲ್ಲಿಯ ಹಿರಿಯರಿಂದ ಇಲ್ಲವೇ ಪರಿಶುದ್ಧಾತ್ಮನಿಂದ ಅನ್ಯ ಕ್ರೈಸ್ತರ ಮೇಲೆ ಬಂಧಿಸಲ್ಪಟ್ಟಿರಲಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ. ಪೌಲ ಮತ್ತು ಬಾರ್ನಬರು ಅನ್ಯ ಕ್ರೈಸ್ತರ ಮೇಲೆ ಯೆಹೂದಿ ನಿಯಮಗಳನ್ನು ಬಂಧಿಸುವದನ್ನು ತಿರಸ್ಕರಿಸಿದ್ದಕ್ಕಾಗಿ ಮೆಚ್ಚಿಕೆ ಪಡೆದರು.

## ಪೌಲನ ಬರಹಗಳಲ್ಲಿ ಸಬ್ಬತ್

ಧರ್ಮಶಾಸ್ತ್ರವು ರದ್ದು ಪಡಿಸಲ್ಪಟ್ಟಿದೆ ಎಂಬುದನ್ನು ಪೌಲನು ತನ್ನ ಬರಹಗಳಲ್ಲಿ ಒಪ್ಪಿಕೊಂಡನು.[8] ಯೆಹೂದ್ಯರ ವಿಶೇಷ ದಿನಗಳನ್ನೂ ಸಬ್ಬತ್‌ಗಳನ್ನೂ ಆಚರಿಸುವ ಹಂಗಿನಲ್ಲಿ ಕ್ರೈಸ್ತರು ಇಲ್ಲವೆಂದು ಅವನು ಸೂಚಿಸಿದನು.

ಗಲಾತ್ಯದಲ್ಲಿಯ ಕ್ರೈಸ್ತರಿಗೆ ಬರೆಯುವಲ್ಲಿ ಅವನು ಹೀಗೆ ಹೇಳಿದನು, "ಯಾವನಾದರೂ ನೇಮ ನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ" (ಗಲಾತ್ಯ 2:16); "ಧರ್ಮ ಪ್ರಮಾಣದ ಪಾಲಿಗೆ ಸತ್ತೆನು" (2:19); "ನೇಮನಿಷ್ಠೆಗಳನ್ನು ಆಧಾರ ಮಾಡಿಕೊಳ್ಳುವವರೆಲ್ಲರೂ ಶಾಪಧೀನರಾಗಿದ್ದಾರೆ" (3:10); "ಧರ್ಮಶಾಸ್ತ್ರದಿಂದ ಯಾರೂ ನೀತಿವಂತರೆಂದು ಎಣಿಸಲ್ಪಡುವದಿಲ್ಲ" (3:11); "ಸೂಚಿತನಾದವನು ಹುಟ್ಟಿ ಬರುವ ತನಕ ..." (3:19); "ನಾವಿನ್ನು ಕಾಯುವವನ (ನಿಯಮದ) ಕೈಕೆಳಗಿರುವವರಲ್ಲ" (3:25); "ದಾಸತ್ವದ [ಧರ್ಮಶಾಸ್ತ್ರದ] ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ" (5:1, 4:21-31ರ ಹಿನ್ನೆಲೆಯಲ್ಲಿ); "ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು ಕೃಪಾಶ್ರಯದೊಳಗಿಂದ ಬಿದ್ದುಹೋದರು" (5:4) ಮತ್ತು "ನೀವು ನೇಮ ನಿಷ್ಠೆಗಳಿಗೆ ಅಧೀನರಲ್ಲ" (5:18).

ಈ ಹೇಳಿಕೆಗಳ ಹಿನ್ನೆಲೆಯಲ್ಲಿ ಪೌಲನು ಹೀಗೆ ಬರೆದನು, "ನೀವು ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವ ಕಾಲಗಳನ್ನೂ ಸಂವತ್ಸರಗಳನ್ನೂ ನಿಷ್ಠೆಯಿಂದ ಆಚರಿಸುತ್ತೀರಿ. ನಾವು ನಿಮಗೋಸ್ಕರ ಪ್ರಯಾಸ ಪಟ್ಟದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ" (ಗಲಾತ್ಯ 4:10, 11). ಗಲಾತ್ಯದವರ ಪುಸ್ತಕದಲ್ಲಿ ಪೌಲನು ಯೆಹೂದಿ ಆಚರಣೆಗಳ ಮೇಲೆ ಕೇಂದ್ರೀಕರಿಸಿದ್ದರಿಂದ, ಯಾವುದೇ ಅನ್ಯ ವಿಶೇಷ ದಿನಗಳಿಗಾಗಿ ಅಲ್ಲ ಆದರೆ ವಿಶೇಷವಾಗಿ ಯೆಹೂದಿ ಆಚರಣೆಗಳನ್ನು ಸಂಬಂಧಿಸಿ ಹೇಳುತ್ತಿರಬಹುದು.

"ದಿನಗಳು ಮತ್ತು ತಿಂಗಳುಗಳು ಮತ್ತು ಕಾಲಗಳು ಹಾಗೂ ವರ್ಷಗಳು" ಎಂಬ ವ್ಯಕ್ತಪಡಿಸುವಿಕೆಯು ಬಹುಶಃ ಯೆಹೂದಿ ಧಾರ್ಮಿಕ ಹಬ್ಬಗಳ ಪದ್ಧತಿಗೆ ಸಂಬಂಧಿಸುತ್ತದೆ, ಯಾಕಂದರೆ ಯೆಹೂದೀಕರಣ ಮಾಡುತ್ತಿರುವವರು ಗಲಾತ್ಯದಲ್ಲಿ ಪೌಲನನ್ನು ಬಲವಾಗಿ ವಿರೋಧಿಸಿದರು. ಇದು ಹಾಗಿದ್ದರೆ, ಆಗ "ದಿನಗಳು" ಸಬ್ಬತ್ತುಗಳ ಮತ್ತು ಒಂದು ದಿನಕ್ಕಾಗಿ ಆಚರಿಸಿದ ಇತರ ಹಬ್ಬಗಳು ಆಗಿರ ಬಹುದು, "ತಿಂಗಳುಗಳು" ಮಾಸಿಕ ಆಚರಣೆಗಳು (ಅಮಾವಾಸ್ಯೆಗಳಂತೆ; ನೋಡಿರಿ ಅರಣ್ಯಕಾಂಡ 10:10)

ಎಂದರ್ಥವಾಗಬಹುದು.[9]

> ಗಲಾತ್ಯದಲ್ಲಿಯ ಹೋರಾಟದ ಹಿನ್ನೆಲೆಯ ದೃಷ್ಟಿಕೋನದಲ್ಲಿ ಗಲಾತ್ಯರು ಒಳಗೊಂಡಿರುತ್ತಿದ್ದ ಆಚರಣೆಗಳು ಯೆಹೂದೀ ಆಚರಣೆಗಳಾಗಿದ್ದುದರಲ್ಲಿ ಸಂಶಯವಿಲ್ಲ. "ದಿನಗಳು" ಸಬ್ಬತ್ ದಿನಗಳಿಗೆ ಸಂಬಧಿಸಿದ್ದವು, ಕ್ಯಾಲಂಡರಿನಲ್ಲಿ ಹೇಳಲ್ಪಟ್ಟ ದಿನಗಳಂದು ಆ ಹಬ್ಬಗಳು ಬರುವದನ್ನು ಒಳಗೊಂಡಿದ್ದವು.[10]

ಪೌಲನು ಗಲಾತ್ಯದಲ್ಲಿಯ ಕ್ರೈಸ್ತರಿಗೆ ಅವರು ಧರ್ಮಶಾಸ್ತ್ರದಿಂದ ಸ್ವತಂತ್ರರಾಗಿರುವರು ಮತ್ತು ಯೆಹೂದ್ಯದ ಹಬ್ಬಗಳನ್ನು ಆಚರಿಸುವ ಅಗತ್ಯತೆಯಿಲ್ಲ ಎಂದು ಜ್ಞಾಪಿಸಿದನು.

ಕೊಲೊಸ್ಸೆಯಲ್ಲಿಯ ಸಭೆಗೂ ಅವನು ಅದೇ ರೀತಿಯ ನಿರ್ದೇಶನವನ್ನು ಕೊಟ್ಟನು:

> ಹೀಗಿರುವದರಿಂದ ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮವಾಸ್ಯೆ ಸಬ್ಬತು ಎಂಬಿವುಗಳ ವಿಷಯದಲ್ಲಿಯೂ ನಿಮ್ಮನ್ನು ದೋಷಿಗಳೆಂದು ಯಾರೂ ಎಣಿಸ ಬಾರದು. ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿವೆ (ಕೊಲೊಸ್ಸೆ 2:16, 17ಎ).

ಆಹಾರ, ಪಾನೀಯ, ಹಬ್ಬಗಳು, ವಿಶೇಷ ದಿನಗಳ ಆಚರಣೆಗಳು ಇಲ್ಲವೇ ಸಬ್ಬತ್ ದಿನಗಳು ಇವುಗಳನ್ನು ಕುರಿತು ಕ್ರೈಸ್ತನು ನ್ಯಾಯ ತೀರಿಸಲು ಯಾರಿಗೂ ಬಿಡಬಾರದು. ಯೇಸುವು ಶಿಲುಬೆಯ ಮೇಲೆ ಮರಣಹೊಂದಿದಾಗ ಇವುಗಳನ್ನು ಕೈಕೊಳ್ಳುವ ನಮ್ಮ ಹಂಗನ್ನು ಮುಕ್ತಾಯಗೊಳಿಸಿದನು. ಅವು ಕೇವಲ "ಪರಲೋಕದ ಸಂಗತಿಗಳ ಛಾಯೆ(ಗಳು) ಆಗಿದ್ದವು" (ಇಬ್ರಿಯ 8:5; ನೋಡಿರಿ 10:1) - ಯೇಸುವಿನಿಂದ ವಾಸ್ತವಿಕತೆಗಳು ತರಲ್ಪಡುವವರೆಗೆ ಆಚರಿಸಲ್ಪಡ ಬೇಕಾದ ಸಾಂಕೇತಿಕ ಚಟುವಟಿಕೆಗಳಾಗಿದ್ದವು (ಕೊಲೊಸ್ಸೆ 2:17; ನೋಡಿರಿ ಇಬ್ರಿಯ 9:9, 10).

"ಶಾಸನಗಳು" (Gk: *dogmasin*) ತೆಗೆದು ಹಾಕಲ್ಪಟ್ಟವು (ಎಫೆಸ 2:15), ಮತ್ತು "ಆಜ್ಞಾ ಶಾಸನಗಳು" (Gk: *dogmasin*) ಶಿಲುಬೆಗೆ ಜಡಿಯಲ್ಪಟ್ಟವು (ಕೊಲೊಸ್ಸೆ 2:14). ಇವುಗಳನ್ನು ಆಜ್ಞಾಪೂರ್ವಕವಾದವುಗಳನ್ನಾಗಿ ಮಾಡಲು ಪ್ರಯತ್ನಿಸಿದವರು ಅವುಗಳನ್ನು ಕೈಕೊಳ್ಳುವದರಿಂದ, ಅವುಗಳ ಮುಖಾಂತರ ನ್ಯಾಯನಿರ್ಣಯವನ್ನು ಹುಡುಕುತ್ತಾರೆ, ಪೌಲನ ಪ್ರಯಾಸಗಳನ್ನು ವ್ಯರ್ಥಗೊಳಿಸುತ್ತಾರೆ.

## ಮುಕ್ತಾಯ

ಯೆಹೂದ್ಯರು ಸಬ್ಬತ್ ದಿನದಂದು ಕೆಲಸ ಮಾಡಬಾರದೆಂದು ಚರಿತ್ರೆಯಲ್ಲೆಲ್ಲಾ ಪುನಃ ಪುನಃ ದೇವರು ಅವರಿಗೆ ಜ್ಞಾಪಿಸಿದನು. ಹಾಗಿದ್ದರೂ, ಸಬ್ಬತ್ ದಿನದಂದು ಕೆಲಸ ಇಲ್ಲವೇ ಆರಾಧನೆಯಬಗ್ಗೆ ಕ್ರೈಸ್ತರಿಗೆ ನಿರ್ದೇಶನದ ಒಂದು ಮಾತು ಹೇಳಲ್ಪಟ್ಟಿರುವದಿಲ್ಲ. ಅನ್ಯರು ಸಬ್ಬತ್ ಕೈಕೊಳ್ಳುವದರ ಬಗ್ಗೆ ಪರಿಚಯವಿಲ್ಲದ ಸಂಸ್ಕೃತಿಯಿಂದ ಬಂದವರಾಗಿದ್ದುದರಿಂದ, ಅವರು ಸಬ್ಬತ್ ದಿನದಂದು ಕೆಲಸ ಮಾಡಬಾರದು, ಆರಾಧನೆ ಮಾಡಬೇಕೆಂದು ಹೇಳಲ್ಪಡ ಬೇಕಾಗಿತ್ತು. ಅಂಥ ನಿರ್ದೇಶನವು ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಡದೇ ಇದ್ದದ್ದರಿಂದ ಯೆಹೂದಿ ಸಬ್ಬತ್ ಅವರ ಮೇಲೆ ಹೊರಿಸಲ್ಪಟ್ಟಿಲ್ಲ, ವಿಶ್ರಾಂತಿಯ ದಿನವಾಗಿಯಾದರೂ ಇಲ್ಲವೇ ಆರಾಧನೆಯ ದಿನವಾಗಿ

ಯಾದರೂ ಆಜ್ಞಾಪಿಸಲ್ಪಟ್ಟಿರುವದಿಲ್ಲ.

ಸಬ್ಬತ್ ಯೆಹೂದ್ಯರಿಗೆ ವಿಶೇಷ ದಿನವಾಗಿತ್ತು. ಆ ದಿನದಂದು ಅವರು ಯಾವ ಕೆಲಸವನ್ನೂ ಮಾಡಬಾರದಾಗಿತ್ತು, ಆದರೆ ವಿಶ್ರಾಂತಿ ಪಡೆದು ಕೊಂಡು, ದೇವರು ತಮ್ಮನ್ನು ಹೇಗೆ ಐಗುಪ್ತದ ಗುಲಾಮಗಿರಿಯಿಂದ ಬಿಡುಗಡೆ ಮಾಡಿದನೆಂಬುದನ್ನು ಜ್ಞಾಪಿಸಿಕೊಳ್ಳಬೇಕಾಗಿತ್ತು. ಅದು ದೇವರ ಮತ್ತು ಇಸ್ರಾಯೇಲ ಜನಾಂಗದ ಮಧ್ಯದಲ್ಲಿ ಒಂದು ಸಂಕೇತ ಮತ್ತು ಒಂದು ಒಡಂಬಡಿಕೆಯಾಗಿತ್ತು, ಅದು ಎಂದಿಗೂ ಅನ್ಯರಿಗಾಗಿರಲಿಲ್ಲ ಮತ್ತು ಅವರಿಗೆ ಎಂದೂ ಕೊಡಲ್ಪಡಲಿಲ್ಲ. ಅದು ಎಂದೂ ಕ್ರೈಸ್ತರಿಗಾಗಿ ಆಜ್ಞಾಪಿಸಲ್ಪಡಲಿಲ್ಲ, ಈಗ ಯೇಸುವು ಬಂದದ್ದರಿಂದ, ಕ್ರೈಸ್ತರು ಯೇಸುವನ್ನು ಮತ್ತು ಆತನು ಹೀಗೆ ಅವರನ್ನು ತನ್ನ ಮರಣ ಮತ್ತು ಪುನರುತ್ಥಾನದ ಮುಖಾಂತರ ಬಿಡುಗಡೆ ಮಾಡಿದನು ಎಂಬುದನ್ನು ಜ್ಞಾಪಿಸಿಕೊಳ್ಳಲು ಭಾನುವಾರ ಕೂಡಿಬರುತ್ತಾರೆ.

---

ಟಿಪ್ಪಣಿಗಳು

[1]J. D. Douglas, ed., *The New International Dictionary of the Bible,* gen. ed. Merrill C. Tenney (Grand Rapids, Mich.: Regency Reference Library, Zondervan Publishing House, 1987), s.v. "Sabbath," by Steven Barabas. [2]ಯೋಹಾನ 4:19-22ರಲ್ಲಿಯ ಬಾವಿಯ ಬಳಿಯಲ್ಲಿ ಸಮಾರ್ಯ ಸ್ತ್ರೀಯೊಂದಿಗೆ ಯೇಸುವಿನ ಸಂಭಾಷಣೆಯು ದೇವರ ಚಿತ್ತವು ಯೆಹೂದ್ಯರಿಗೆ ತಿಳಿದಿತ್ತು ಮತ್ತು ಯೆರೂಸಲೇಮು ಆರಾಧನೆಗಾಗಿ ಸ್ಥಳವಾಗಿತ್ತು ಎಂಬುದನ್ನು ಅನ್ವಯದೊಂದಿಗೆ ತೋರಿಸುತ್ತದೆ. [3]Jack P. Lewis, T*he Gospel According to Matthew*, Part 1, The Living Word Commentary Series, ed. Everett Ferguson (Austin, Tex.: Sweet Publishing Co., 1976), 171. [4]J. C. McCann Jr., "Sabbath," in *The International Standard Bible Encyclopedia,* gen. ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:251. [5]E. Loshe, VII, "*sabbaton,*" in *Theological Dictionary of the New Testament,* ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 991. [6]R. C. H. Lenski, *The Interpretation of St. Matthew's Gospel* (Minneapolis, Minn.: Augsburg Publishing House, 1943), 939-40. [7]D. A. Carson, ed., *From Sabbath to Lord's Day: A Biblical, Historical and Theological Investigation* (Grand Rapids, Mich.: Academie Books, Zondervan Publishing House, 1982), 73-74. [8]"ಕರ್ತನ ದಿನ" ಎಂಬ ಪಾಠವನ್ನು ನೋಡಿರಿ. [9]Daniel C. Arichea Jr. and Eugene A. Nida, *A Translators Handbook on Paul's Letter to the Galatians* (New York: United Bible Societies, 1976), 97. [10]James Montgomery Boice and Merrill C. Tenney, eds., *The Expositor's Bible Commentary,* vol. 10, *Romans-Galatians,* gen. ed. Frank E. Gaebelein (Grand Rapids, Mich.: Zondervan Publishing House, 1976), 476.

© 2009 Truth for Today